

ಮಾಡುತ್ತಿದ್ದಾರೆ. ಆಕ್ಸ್‌ಫರ್ಡ್, ದಿ ನ್ಯೂ ಸ್ಕೂಲ್ ಹಾಗೂ ಮ್ಯಾಂಚೆಸ್ಟರ್ ಯೂನಿವರ್ಸಿಟಿಯಲ್ಲಿ ರಾಜಕೀಯ, ಪಾರಿಸರಿಕ ಅಧ್ಯಯನ ಹಾಗೂ ಭೂಗೋಳವಿಜ್ಞಾನವನ್ನು ಕಲಿತಿರುವ ಸೋಫಿ ಲೂಯಿಸ್, ಇತ್ತೀಚೆಗೆ 'ಅಬಾಲಿಷ್ ದಿ ಫ್ಯಾಮಿಲಿ – ಎ ಮ್ಯಾನಿಫೆಸ್ಟೊ ಫಾರ್ ಕೇರ್ ಅಂಡ್ ಲಿಬರೇಷನ್' ಎಂಬ ಗಮನಾರ್ಹ ಕೃತಿ ಪ್ರಕಟಿಸಿದ್ದಾರೆ. ಆ ಪುಸ್ತಕವು 'ಕೇರ್ ಕ್ರೈಸಿಸ್' ಎಂಬ ವಿಷಯದ ಬಗೆಗೆ ಹಲವು ಹೊಳಹುಗಳನ್ನು ತೆರೆದಿಟ್ಟಿದೆ. ಆರೈಕೆಯೇ ಒಂದು ಸಮಸ್ಯೆ ಆಗುತ್ತಿದೆ ಎನ್ನುವುದನ್ನು ಕೃತಿ ಧ್ವನಿಸುತ್ತದೆ.

ಕುಟುಂಬವನ್ನು ಯಾರೂ ಆಯ್ಕೆ ಮಾಡಿಕೊಂಡಿರುವುದಿಲ್ಲ. ಹುಟ್ಟಿನಿಂದ ಎಲ್ಲರೂ ಒಂದು ಕುಟುಂಬದ ಭಾಗಗಳಾಗಿರುತ್ತೇವೆ. ಅಲ್ಲಿ ಅದೃಷ್ಟವಂತರಿಗೆ ಆರೈಕೆ ಸಿಗುತ್ತದೆ. ಪ್ರೀತಿ ಸಿಗುತ್ತದೆ. ಸುರಕ್ಷತಾ ಭಾವ ಸಿಗುತ್ತದೆ. ಆದರೆ, ಅನೇಕರಿಗೆ ಕುಟುಂಬ ವ್ಯವಸ್ಥೆಯೇ ಸದಾಕಾಲ ಕಾಡುವ ಮಾನಸಿಕ ಕ್ಷೋಭೆಯನ್ನು ತಂದೊಡ್ಡುತ್ತದೆ. 'ಹ್ಯಾಪಿ ಫ್ಯಾಮಿಲಿ' ಎಂದು ಪರಿಭಾವಿತವಾದ ಕಡೆಯೂ ಇದು ಇರುವುದನ್ನು, ವೇತನವೇ ಇಲ್ಲದೆ ಸತತವಾಗಿ ದುಡಿದು ಹೈರಾಣಾಗುವ ಹೆಣ್ಣುಮಕ್ಕಳಲ್ಲೂ ಈ ಸಮಸ್ಯೆ ಇರುವುದನ್ನು ಕಾಣುತ್ತೇವೆ – ಎನ್ನುವುದು ಸೋಫಿ ಲೂಯಿಸ್ ವಾದ. ಈ ವಾದದ ಆಧಾರದ ಮೇಲೆಯೇ ಅವರು 'ಫ್ಯಾಮಿಲಿ ಶುಡ್ ಬಿ ಅಬಾಲಿಶ್ಡ್', ಅರ್ಥಾತ್ 'ಕುಟುಂಬವನ್ನೇ ತೊಡೆದುಹಾಕಬೇಕು' ಎಂದೂ ಖಂಡತುಂಡವಾಗಿ ಹೇಳಿ, ಅದನ್ನೇ ಕೃತಿಯಾಗಿಸಿದ್ದಾರೆ.

ಸೋಫಿ ಬರಹದ ಆಶಯ ಹೀಗಿದೆ: ''ನಾವೆಲ್ಲ ಆರೋಗ್ಯವನ್ನೂ ಲೆಕ್ಕಿಸದೆ ದುಡಿಯುತ್ತೇವೆ. ಸುಸಜ್ಜಿತವಾದ ಮನೆಯನ್ನು ಸಲೀಸಾಗಿ ಕೊಳ್ಳುವುದೂ ಎಷ್ಟೋ ಜನರಿಗೆ ಸಾಧ್ಯವಿಲ್ಲ. ವಸತಿ, ಹಿರಿಯರ ಆರೈಕೆ, ಅಂಗವಿಕಲರ ನೋಡಿಕೊಳ್ಳುವುದು, ಸೈಕೊಥೆರಪಿ ಹಾಗೂ ಕ್ವೀರ್ ಯುವಜನತೆಗೆ ಬೆಂಬಲ ನೀಡುವುದನ್ನೆಲ್ಲ ಬಹುತೇಕ ಸರ್ಕಾರಗಳು ಮರೆತೇಬಿಟ್ಟಿವೆ. ಕೋವಿಡ್–19 ಸಾಂಕ್ರಾಮಿಕ ರೋಗವು ಇಂತಹ ಹುದುಗಿದ್ದ ಸಾಂಕ್ರಾಮಿಕ ರೋಗಗಳನ್ನೆಲ್ಲ ಹೊರಗೆಳೆಯಲು ಕಾರಣವಾಯಿತು. ಕೆಲವರ ಪಾಲಿಗೆ ಕುಟುಂಬ ವ್ಯವಸ್ಥೆ ಎನ್ನುವುದೇ ಒಂದು ಕೆಟ್ಟ ಜಾಲವಾಗಿರುತ್ತದೆ. ಆ ಬಲೆಯಲ್ಲಿ ಸಿಲುಕಿ ನರಳುವ ಅವರು ಸಂಬಳವೇ ಇಲ್ಲದೆ ಮನೆಯವರೆಲ್ಲರಿಗಾಗಿ ತಮ್ಮ ಬದುಕನ್ನು ತೇಯುತ್ತಿರುತ್ತಾರೆ.

## ಬೆಂಗಳೂರಿನಲ್ಲಿ 'ಟಾಯ್‌ಬಾಯ್'

'ಅಗತ್ಯಗಳ ಪೂರೈಕೆಯೇ ಅನ್ವೇಷಣೆಯ ತಾಯಿ' ಎನ್ನುವ ಮಾತೊಂದನ್ನು ಎಂಬಿಎ ಪದವೀಧರರು ಹೇಳುತ್ತಿರುತ್ತಾರೆ. 'ಬಾಯ್‌ಫ್ರೆಂಡ್ ಬೇಕು, ಸೆಕ್ಸ್ ಬೇಡ'. 'ಬಾಯ್‌ಫ್ರೆಂಡ್ ಬೇಕು, ಮದುವೆಯ ಹಂಗು ಬೇಡ'. 'ಬಾಯ್‌ಫ್ರೆಂಡ್ ಬೇಕು, ಸದಾ ಕಾಲ ಅವನು ಕಾಡಕೂಡದು...' – ಇಂತಹ ಮನಃಸ್ಥಿತಿಯ ಹೆಣ್ಣುಮಕ್ಕಳು ಬೆಂಗಳೂರಿನಲ್ಲೂ ಇದ್ದಾರೆ. ಅಂಥವರಿಗೆ ತತ್‌ಕ್ಷಣದ ದುಗುಡಶಮನಕ್ಕೆ ಬಾಯ್‌ಫ್ರೆಂಡ್ ಏನೋ ಬೇಕು. ಆದರೆ, ಅವನೊಟ್ಟಿಗೆ ಕಡಿದುಕೊಳ್ಳದಂಥ ನಂಟು ಇಟ್ಟುಕೊಳ್ಳುವುದೂ ಬೇಡ. ಇಂಥವರನ್ನು ಗುರಿಯಾಗಿಟ್ಟುಕೊಂಡೇ 'ಟಾಯ್‌ಬಾಯ್' ಎಂಬ ಇನ್‌ಸ್ಟಾಗ್ರಾಂ ಖಾತೆಯೊಂದು ಇದೇ ವರ್ಷ ಆಗಸ್ಟ್‌ನಲ್ಲಿ ಶುರುವಾಗಿದೆ. ಬಾಡಿಗೆ ಆಧಾರದಲ್ಲಿ ಇದು ಬಾಯ್‌ಫ್ರೆಂಡ್‌ಗಳನ್ನು ಪೂರೈಸುವ ಸೌಕರ್ಯದ ಪೋರ್ಟಲ್. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಇದರ ಆ್ಯಪ್ ಇಲ್ಲವಾದರೂ, ಟಾಯ್‌ಬಾಯ್ ಪೋರ್ಟಲ್‌ನ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಿಂದಲೇ ಈ ಸೇವೆಯನ್ನು ಪಡೆಯಲು ಸಾಧ್ಯವಿದೆ.

ಒತ್ತಡದಿಂದ ಅಥವಾ ವ್ಯಾಕುಲದಿಂದ ಬಳಲುತ್ತಿರುವ ತರುಣಿಯರು ಅಥವಾ ಯುವತಿಯರು ಟಾಯ್‌ಬಾಯ್ ಸೇವೆ ಪಡೆಯಬಹುದು ಎನ್ನುವ ಒಕ್ಕಣೆ ಈ ಪೋರ್ಟಲ್‌ನ ಖಾತೆಯಲ್ಲಿ ಇದೆ. ಅದಕ್ಕೆ ಪ್ರತಿಕ್ರಿಯಿಸಿರುವವರಲ್ಲಿ ಕೆಲವರು ಐಟಿ ಮಂದಿಯೂ ಇದ್ದಾರೆ. 'ಜೆಇಇ ಪರೀಕ್ಷೆ ಪಾಸಾದಾಗಲೂ ಈ ಖಾತೆಯನ್ನು ನೋಡಿದಾಗ ಆಗಿರುವಷ್ಟು ಖುಷಿ ನಮ್ಮ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಆಗಿರಲಾರದು' ಎಂದು ಒಬ್ಬರು ಟ್ವಿಟ್ಟರ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ. ಜಪಾನ್‌ನಲ್ಲಿನ ಸಾತತ್ಯದ ಬೀದಿಯಲ್ಲಿ ಕಂಡಂಥ ಅಪರಿಚಿತ ಕೈಗಳು ಬೆಂಗಳೂರು ಮಹಾನಗರದಲ್ಲೂ ಕಾಣುತ್ತಿವೆ ಎಂದಾಯಿತು.

ಈ ಟಾಯ್‌ಬಾಯ್ ಸೇವೆಯಲ್ಲಿ ಕೂಡ ಲೈಂಗಿಕತೆ ನಿಷಿದ್ಧ. ತೊಡೆಮೇಲೆ ಮಲಗುವ, ಕಿವಿಯ ಗುಗ್ಗೆ ತೆಗೆಸಿಕೊಳ್ಳುವ, ಲಾಲಿ ಹಾಡು ಕೇಳುವ, ಇನ್ಯಾವುದೋ ತನ್ನನ್ನು ಕಾಡುತ್ತಿರುವ ವಿಷಯದ ಕುರಿತು ಚರ್ಚಿಸುವ ಅವಕಾಶಗಳೆಲ್ಲ ಇಲ್ಲಿವೆ. ಇಂತಹ ಸೇವೆ ಒದಗಿಸುವ ಹುಡುಗರಿಗೂ ತರಬೇತಿ ನೀಡಲಾಗುತ್ತೆನ್ನುವುದು ವಿಶೇಷ.

ಜಪಾನ್‌ನ ಯೂಟ್ಯೂಬ್ ಚಾನೆಲ್‌ನಲ್ಲಿ ಕಾಣುವ ಬದುಕಿನ ಸಕಲ ಸಂಕಷ್ಟಗಳನ್ನೂ ಹೊತ್ತಂತಹ ಯುವಕರಿಗೂ ಬೆಂಗಳೂರಿನ ಟಾಯ್‌ಬಾಯ್ ಸೇವೆ ಬಯಸುವ ಯುವತಿಯರಿಗೂ ಸಾಮ್ಯವಿರಬೇಕು.